ಎಂ ವಿ ಸಿ ನಂ. 554/2022
(ಎಂ ವಿ ಸಿ ನಂ. 553/2022)
ಪಿ.ಡಬ್ಲು- 2

ದಿನಾಂಕಃ 08-01-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ. ಎನ್ ಬಿ ಯು ವಕೀಲರಿಂದ.**

ನಾನು ನನ್ನ ಮುಖ್ಯ ವಿಚಾರಣೆಯ ಭಾಗಾಂಶವಾಗಿ ಸಾಕ್ಷ್ಯ ಪ್ರಮಾಣ ಪತ್ರ ಸಲ್ಲಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸರಿಯಾಗಿರುತ್ತವೆ.

ಶವ ಪಂಚನಾಮೆ, ಶವ ಪರೀಕ್ಷಾ ವರದಿ ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-14 ಮತ್ತು ನಿಪಿ-15 ಎಂದು, ಮೃತ ಆನಂದ, ನನ್ನ ಅಧಾರ ಕಾರ್ಡ ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-16 ಮತ್ತು ನಿಪಿ-17 ಎಂದು, ಕುಟುಂಬ ಪಡಿತರ ಚೀಟಿ ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-18 ಎಂದು ಗುರುತಿಸಲಾಯಿತು. (ನಿಪಿ-16 ರಿಂದ ನಿಪಿ-18 ದಾಖಲೆಗಳ ಮೂಲ ಪ್ರತಿಗಳನ್ನು ಪರಿಶೀಲಿಸಿ ಸರಿ ಎಂದು ಕಂಡು ಅವುಗಳ ದೃಢೀಕೃತ ನಕಲುಗಳನ್ನು ನಿಶಾನೆ ಅಂತಾ ಪಾಟೀ ಸವಾಲಿನ ಸಂದರ್ಭದಲ್ಲಿ ಮೂಲ ಪ್ರತಿಗಳನ್ನು ಹಾಜರುಪಡಿಸುವ ಷರತ್ತಿನೊಂದಿಗೆ ಗುರುತಿಸಲಾಗಿರುತ್ತದೆ.)

ಆದ್ದರಿಂದ ನಾನು ಕೋರಲಾದಂತೆ ಅರ್ಜಿಯನ್ನು ಖರ್ಚು ಸಹಿತ ಮಂಜೂರು ಮಾಡಲು ಪ್ರಾರ್ಥಿಸುತ್ತೇನೆ.

**ಪಾಟೀಸವಾಲುಃ- ಎದುರುದಾರರ ನಂ.2 ಪರ ಶ್ರೀ. ಎನ್ ಡಿ ವಕೀಲರಿಂದ.**

ಮೃತ ನನ್ನ ಮಗನು ಎಂದು ತೋರಿಸಲು ನಾನು ಯಾವುದೇ ಕಾಗದ ಪತ್ರ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನಗೆ ಮೃತ ಮಗ ಹಾಗೂ ಇನ್ನೊಬ್ಬ ಜೀವಿತ ಮಗ ಮಾತ್ರ ಇರುತ್ತಾರೆ. ಈಗ ಮತ್ತೇ ಹೇಳುವುದೇನೆಂದರೆ ಮೃತ ಮಗ ಮಾತ್ರ ನನ್ನ ಏಕೈಕ ಮಗ ಇರುತ್ತಾರೆ. ನನ್ನ ಮಗ ಹುಟ್ಟಿದ ದಿನಾಂಕ ನನಗೆ ಹೇಳಲು ಬರುವುದಿಲ್ಲ. ನನ್ನ ಮಗ ಕೂಲಿ ಕೆಲಸ ಮಾಡಿ ಪ್ರತಿ ದಿವಸ ರೂ.100/- ಕೂಲಿ ಹಣ ಪಡೆಯುತ್ತಿದ್ದರು.

2. ನನ್ನ ಮಗ ದಿನಾಂಕ 14-10-2020 ರಂದು ಕಾರವಾರಕ್ಕೆ ಹೊರಟಿದ್ದು ಇತ್ತು. ಅವನೊಂದಿಗೆ ಗೆಳೆಯ ಕೇದಾರಿ ಇದ್ದರು. ನಾನು ಶಾಲೆ ಕಲಿತಿಲ್ಲ. ನಾನು ಈ ಅರ್ಜಿ ಸಲ್ಲಿಸುವಾಗ ಪ್ರಕರಣಕ್ಕೆ ಸಂಬಂಧಿಸಿದಂತೆ ದೋಷಾರೋಪಣೆ ಪಟ್ಟಿಯನ್ನು ಓದಿಸಿ ತಿಳಿದುಕೊಂಡಿಲ್ಲ. ಅಪಘಾತ ಆಗಿದೆ ಎಂದು ಹೇಳಲಾದ ಸ್ಥಳ ರಾಷ್ಟ್ರೀಯ ಹೆದ್ದಾರಿ ಎಂದರೆ ಸರಿ. ಸದರಿ ರಸ್ತೆಯ ಮೇಲೆ ನೂರಾರು ವಾಹನಗಳು ಹೋಗಿ ಬಂದು ಮಾಡುತ್ತವೆ ಎಂದರೆ ಸರಿ. ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನ ಚಲಾವಣೆ ಮಾಡುವಾಗ ಸಂಚಾರಿ ನಿಯಮ ಪಾಲಿಸಿ ವಾಹನ ಚಲಾವಣೆ ಮಾಡಬೇಕಾಗುತ್ತದೆ ಎಂದರೆ ಸರಿ. ದ್ವಿಚಕ್ರ ವಾಹನದ ಚಾಲಕ ನನ್ನ ಮಗ ಆನಂದ ನಿಪಿ-1 ಮತ್ತು 2 ರಂತೆ ಅತೀ ವೇಗದಿಂದ, ನಿಷ್ಕಾಳಜಿತನದಿಂದ ವಾಹನ ಚಲಾವಣೆ ಮಾಡಿ ನಿಯಂತ್ರಣ ಸಾಧಿಸದೇ ವಾಹನ ಕೆಡವಿಕೊಂಡು ನಂತರ ಲಾರಿಗೆ ಬಲಬದಿಯ ಚಕ್ರಕ್ಕೆ ಡಿಕ್ಕಿಪಡಿಸಿರುವುದಾಗಿ ದೂರುದಾರರು ದೂರು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-1 ಮತ್ತು 2 ಕಾಗದ ಪತ್ರಗಳಲ್ಲಿ ಈ ಕುರಿತು ಬರೆಯಲಾಗಿರುತ್ತದೆ ಎಂದರೆ ಸರಿಯಲ್ಲ. ಹಾಗೇ ಬರೆದಿದ್ದರೂ ಅದರ ಸಂಗತಿ ನನಗೆ ಗೊತ್ತಿದ್ದರೂ ನಾನು ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-5 ರಂತೆ ಅಪಘಾತ ಕಾರವಾರದಿಂದ ಅಂಕೋಲಾ ಕಡೆಗೆ ಸಾಗಿದ ರಸ್ತೆಯ ಎಡಭಾಗದಲ್ಲಿ ಆಗಿರುವುದಾಗಿ ಕಾಣಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಹಾಗೇ ನಿಪಿ-5 ಹಾಜರುಪಡಿಸಿದ್ದರೂ ನಾನು ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-7 ದಾಖಲೆಯಲ್ಲಿಯೂ ಸಹ ದ್ವಿಚಕ್ರ ವಾಹನದ ನಿರ್ಲಕ್ಷತನದ ವಾಹನ ಚಾಲನೆ ಮತ್ತು ಅದರಿಂದ ಆದ ಅಪಘಾತದ ಕುರಿತು ನಮೂದು ಇರುತ್ತದೆ ಎಂದರೆ ಸರಿಯಲ್ಲ. ಹಾಗೇ ನಿಪಿ-7 ರ ಎಲ್ಲ ಸಂಗತಿ ಗೊತ್ತಿದ್ದರೂ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನಿಪಿ-7 ರಂತೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ ನಂತರ ನಾನು ಲಾರಿ ಚಾಲಕನ ಮೇಲೆ ಕಾನೂನು ಕ್ರಮ ಜರುಗಿಸಿಲ್ಲ. ನನ್ನ ಸಾಕ್ಷ್ಯದಲ್ಲಿಯೂ ಸಹ ದೋಷಾರೋಪಣೆ ಪಟ್ಟಿಯ ಬಗ್ಗೆ ಎಲ್ಲಿಯೂ ಸಾಕ್ಷ್ಯ ನುಡಿದಿಲ್ಲ ಎಂದರೆ ಸರಿಯಲ್ಲ. ನಾನು ಪರಿಹಾರ ಹಣ ಪಡೆಯುವುದರ ಸಲುವಾಗಿ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದ್ವಿಚಕ್ರ ವಾಹನದ ಮಾಲೀಕ, ವಿಮಾ ಕಂಪನಿ ಇವರನ್ನು ಈ

ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ದ್ವಿಚಕ್ರ ವಾಹನಕ್ಕೆ ವಿಮಾ ಪಾಲಸಿ ಮತ್ತು ಚಾಲಕನ ವಾಹನ ಚಾಲನಾ ಪರನವಾನಿಗೆ ಪತ್ರ ಇದ್ದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಅಪಘಾತ ದ್ವಿಚಕ್ರ ವಾಹನದ ಚಾಲಕನ ತಪ್ಪಿನಿಂದ ಆದ ವಿಷಯ ಗೊತ್ತಿದ್ದರೂ ಪರಿಹಾರ ಹಣ ಪಡೆಯುವುದರ ಸಲುವಾಗಿ ಲಾರಿ ಚಾಲಕ ಮತ್ತು ವಿಮಾ ಕಂಪನಿಯ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ದ್ವಿಚಕ್ರ ವಾಹನದ ಚಾಲಕನಿಗೆ ಚಾಲನಾ ಪ್ರಮಾಣ ಪತ್ರ ಇರಲಿಲ್ಲ, ವಾಹನದ ಮೇಲೆ ವಿಮೆ ಇರಲಿಲ್ಲ ಆದ್ದರಿಂದ ಲಾರಿ ಮತ್ತು ಅದರ ವಿಮಾ ಕಂಪನಿಯ ಮೇಲೆ ನಾನು ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತ ಲಾರಿಯ ಚಾಲಕನ ತಪ್ಪಿನಿಂದ ಆಗಿರುವುದಾಗಿ ಹೇಳಿದ್ದು ಅದರ ಕುರಿತು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ನನಗೆ 2 ನೇ ಎದುರುದಾರರಿಂದ ಯಾವುದೇ ಪರಿಹಾರ ಹಣ ಬರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.